ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 2, May-June 2025, Pp. 22-35
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹೊಯ್ಸಳರ ಕಾಲದಲ್ಲಿ ವೀರಪೂಜಾ ಸಂಪ್ರದಾಯ: ಚಿಕ್ಕಮಗಳೂರು ಪರಿಸರದ ಕೆಲವು ವೀರಗಲ್ಲುಗಳನ್ನು ಅನುಲಕ್ಷಿಸಿ

**ಡಾ. ಟಿ. ಮಂಜುನಾಥ**
ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಗಟಿ
ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ

**Abstract:**
*ಸದುದ್ದೇಶದಿಂದ ನಿಸ್ವಾರ್ಥವಾಗಿ ಪ್ರಾಣ ತ್ಯಾಗ ಮಾಡಿದ ವ್ಯಕ್ತಿಯನ್ನು ಅವನ ಸಾವಿನ ನಂತರವು ನೆನಪಿಟ್ಟುಕೊಳ್ಳುವ ಹಾಗೂ ಅವನನ್ನು ಜನ ಮಾನಸದಲ್ಲಿ ದೈವತ್ವಕ್ಕೇರಿಸಿ ಆರಾಧಿಸುವ ಉದ್ದೇಶದಿಂದ ಹಿಂದೆ ವೀರಗಲ್ಲುಗಳನ್ನು ಹಾಕಿಸುತ್ತಿದ್ದರು. ಈ ಮೂಲಕ ವೀರನನ್ನು ಪೂಜಿಸಲಾಗುತಿತ್ತು. ದಕ್ಷಿಣ ಭಾರತೀಯ ಇತಿಹಾಸದಲ್ಲಿ ವೀರರ ಪೂಜಾ ಪರಂಪರೆಗೆ ವಿಶಿಷ್ಟ ಸ್ಥಾನ ಇತ್ತೆಂಬುದು ಇಲ್ಲಿನ ಶಾಸನಶಾಸ್ತ್ರ, ಪ್ರಾಕ್ತನಶಾಸ್ತ್ರ ಹಾಗೂ ಸಾಹಿತ್ಯಿಕ ಆಧಾರಗಳಿಂದ ವಿಧಿತವಾಗುವ ಸಂಗತಿ. ಇಂದು ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲಲ್ಲಿ ಕಂಡು ಬರುವ ವೀರಗಲ್ಲುಗಳು ಈ ಪರಂಪರೆಗೆ ಸಾಕ್ಷಿಯಾಗಿವೆ. ಪ್ರಸ್ತುತ ಲೇಖನದಲ್ಲಿ ಚಿಕ್ಕಮಗಳೂರು ಪರಿಸರದ ಕೆಲವು ವೀರಗಲ್ಲುಗಳ ಆಧಾರದ ಮೇಲೆ ಹೊಯ್ಸಳರ ಕಾಲದಲ್ಲಿ ವೀರಪೂಜಾ ಸಂಪ್ರದಾಯವನ್ನು ವಿವರಿಸಲಾಗಿದೆ.*

**Keywords:** *ವೀರಗಲ್ಲುಗಳು, ಮಾಸ್ತಿಗಲ್ಲುಗಳು, ವೀರ ಪೂಜೆ, ಹೊಯ್ಸಳರು, ಚಿಕ್ಕಮಗಳೂರು.*

## ಪೀಠಿಕೆ

ಮರಣದ ನಂತರದಲ್ಲಿ ಒಬ್ಬ ವ್ಯಕ್ತಿಯ ಸ್ಮರಣಾರ್ಥವಾಗಿ ವೀರಗಲ್ಲುಗಳನ್ನು ನೆಡುವ ಪದ್ಧತಿ ಬಹು ಪ್ರಾಚೀನ ಕಾಲದಿಂದ ನಡೆದು ಬಂದ ಸಂಪ್ರದಾಯವಾಗಿದೆ. ಸಂಗಂ ಸಾಹಿತ್ಯದಲ್ಲಿ ವೀರ ಪೂಜೆ, ಹಾಗೂ ವೀರಗಲ್ಲು ನೆಡುವುದರ ಉಲ್ಲೇಖವಿದೆ. ಅತ್ಯಂತ ಪ್ರಾಚೀನ ವೀರಗಲ್ಲುಗಳು ತಮಿಳುನಾಡಿನಲ್ಲಿ ಕಂಡುಬರುತ್ತವೆ. ದಕ್ಷಿಣ ಕರ್ನಾಟಕದಲ್ಲಿ ಸಾ.ಶ.7–8ನೇ ಶತಮಾನದ ಹೊತ್ತಿಗೆ ವೀರಗಲ್ಲು ನೆಡುವ ಸಂಪ್ರದಾಯ ನಡೆದು ಬಂದಿರುವುದನ್ನು ಕಾಣಬಹುದು. ಗಂಗರು ಪ್ರಾರಂಭದಲ್ಲಿ ವೀರ ಪ್ರಧಾನವಾಗಿರುವ ವೀರಗಲ್ಲುಗಳನ್ನು ಹಾಕಿಸುತ್ತಿದ್ದರು. ನಂತರದಲ್ಲಿ ರಾಷ್ಟ್ರಕೂಟ ಶೈಲಿಯನ್ನು ಅನುಸರಿಸಲು ಪ್ರಾರಂಭಿಸಿದರು. ಬಾದಾಮಿ ಚಾಲುಕ್ಯ ಹಾಗೂ ರಾಷ್ಟ್ರಕೂಟ ಕಾಲಕ್ಕಾಗಲೇ ಸಿದ್ಧಮಾದರಿಯೊಂದು ರೂಪುಗೊಂಡಿತ್ತು. ಇವರು ಮೂರು, ನಾಲ್ಕು, ಐದು ಹಂತಗಳ ವೀರಗಲ್ಲುಗಳನ್ನು ನೆಡುತ್ತಿದ್ದರು. ಕೆಳಗಿನ ಹಂತ ವೀರನು ಹೋರಾಡುತ್ತಾ ಮರಣ ಹೊಂದುವ ಚಿತ್ರಣವಾಗಿದ್ದು, ಭೂಮಿಯ ಮೇಲೆ ವೀರನ ನೈಜ ಜೀವನದ ಪ್ರತೀಕವಾಗಿದೆ. ಮಧ್ಯದ ಹಂತವು ವೀರನು ಅಪ್ಸರೆಯರ ಹೆಗಲ ಮೇಲೆ ಕೈ ಹಾಕಿ ಮೋಡಗಳ ನಡುವೆ ತೇಲುತ್ತಾ ಸ್ವರ್ಗಾರೋಹಣ

***Please cite this article as:*** ಮಂಜುನಾಥ ಟಿ. (2025). ಹೊಯ್ಸಳರ ಕಾಲದಲ್ಲಿ ವೀರಪೂಜಾ ಸಂಪ್ರದಾಯ: ಚಿಕ್ಕಮಗಳೂರು ಪರಿಸರದ ಕೆಲವು ವೀರಗಲ್ಲುಗಳನ್ನು ಅನುಲಕ್ಷಿಸಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(2), 22–35

ಮಾಡುತ್ತಿರುವ ಬಗ್ಗೆ ತಿಳಿಸುತ್ತದೆ. ಇದು ವೀರನ ಮರಣ ನಂತರದ ಜೀವನದ ಕಲ್ಪನೆಯ ಚಿತ್ರಣವಾಗಿದ್ದು, ಭೂಮಿ ಮತ್ತು ಸ್ವರ್ಗದ ನಡುವಿನ ಆಕಾಶ ಅಥವಾ ಅಂತರಿಕ್ಷವನ್ನು ಸೂಚಿಸುತ್ತದೆ. ಮೇಲಿನ ಕೊನೆಯ ಹಂತವು ವೀರಮರಣದಿಂದ ದೊರಕಿದ ಸ್ವರ್ಗ ಜೀವನದ ಕಲ್ಪನೆಯ ಬಗ್ಗೆ ತಿಳಿಸಿಕೊಡುತ್ತದೆ. ಈ ಹಂತವು ಸ್ವರ್ಗಲೋಕದ ಪ್ರತೀಕವಾಗಿದೆ. ಇಲ್ಲಿ ವೀರನು ಉನ್ನತ ಸ್ಥಾನ ಹೊಂದಿದ್ದ. ವೀರಗಲ್ಲುಗಳು ಭಾರತೀಯ ಲೋಕ ಕಲ್ಪನೆಯ ನಿರೂಪಕಗಳಂತೆ ಕಂಡುಬಂದಿವೆ ಕೆಳಗಿನ ಹಂತವು ಭೂಲೋಕ, ಮೇಲಿನ ಹಂತವು ಸ್ವರ್ಗಲೋಕ, ಮಧ್ಯದ ಹಂತವು ಈ ಎರಡು ಲೋಕಗಳ ನಡುವಿನ ಆಕಾಶ ಅಥವಾ ಅಂತರಿಕ್ಷವನ್ನು ಪ್ರತಿನಿಧಿಸುತ್ತವೆ.

ರಾಷ್ಟ್ರಕೂಟ ಕಾಲದ ನಂತರದಲ್ಲಿ ವೀರಗಲ್ಲು ಮಾದರಿಗಳಲ್ಲಿ ಬದಲಾವಣೆಗಳು ಕಂಡುಬಂದವು. ಮೇಲಿನ ಹಂತದಲ್ಲಿ ಶಿವಲಿಂಗು, ನಂದಿ, ಆಚಾರ್ಯರು ವೀರನೊಂದಿಗೆ ಕಾಣಿಸಿಕೊಂಡವು. ವೀರನೇ ಪರಮೋಚ್ಚ ಎಂಬ ಕಲ್ಪನೆಯಲ್ಲಿ ಬದಲಾವಣೆ ಉಂಟಾಗಿ ಶಿವಲಿಂಗು ಆ ಸ್ಥಾನ ಪಡೆಯಿತು. ಸ್ವರ್ಗಾರೋಹಣ ಹಂತದಲ್ಲಿ ಮಂಟಪ ಅಥವಾ ಪುಷ್ಪಕ ವಿಮಾನ ಕಾಣಿಸಿಕೊಂಡು, ಅದರೊಳಗೆ ವೀರನು ಕುಳಿತು ಸ್ವರ್ಗಕ್ಕೆ ಹೋಗುವಂತೆ, ಅದನ್ನು ಅಪ್ಸರೆಯರು ಹೊತ್ತು ಹೋಗುವಂತೆ ಚಿತ್ರಿಸಲಾಯಿತು. ಕೆಳಗಿನ ಹೋರಾಟ ಹಂತವನ್ನು ಮತ್ತಷ್ಟು ನೈಜಗೊಳಿಸಲು ಶಿಲ್ಪಿಯು ಪ್ರಯತ್ನಿಸಿದಂತೆ ಕಂಡುಬಂದಿದ್ದು ಹೋರಾಟ ನಡೆದ ನಿರ್ದಿಷ್ಟ ಉದ್ದೇಶವನ್ನು ತಿಳಿಸಲು ಈ ಹಂತದಲ್ಲಿ ದನಗಳು (ತುರುಗೋಳ್ ವೀರಗಲ್ಲುಗಳಲ್ಲಿ), ನಗ್ನ ಸ್ತ್ರೀಯರು (ಪೆಣ್ಬುಯಲ್‌ನಲ್ಲಿ), ಪ್ರಾಣಿಗಳು (ಪ್ರಾಣಿ ಬೇಟೆ ವೀರಗಲ್ಲುಗಳಲ್ಲಿ), ಹೀಗೆ ವಿವಿಧ ಅಂಶಗಳನ್ನು ಸೇರಿಸಲಾಯಿತು. **"ರಾಷ್ಟ್ರಕೂಟ ಕಾಲದ ವೀರಗಲ್ಲುಗಳೂ ನಮಗೆ ಆ ಕಾಲದ ವೀರಪೂಜೆಯ ಕಲ್ಪನೆಯನ್ನು ಕಟ್ಟಿಕೊಡುತ್ತವೆ. ಅಷ್ಟೇ ಅಲ್ಲ ವೀರಪೂಜೆಯ ಕೇಂದ್ರ ವಸ್ತುವಾದ ವೀರಗಲ್ಲುಗಳ ಮೇಲೆ ಕೆತ್ತಿರುವ ಶಿಲ್ಪಗಳು ಅದನ್ನು ಪೂಜಿಸುವ ಜನರಿಗೆ ವೀರಸ್ವರ್ಗದ ಕಲ್ಪನೆಯನ್ನು ಕಟ್ಟಿಕೊಡುವ ಕೆಲಸವನ್ನೂ ಮಾಡಿದವು ಎಂಬುದು ಮುಖ್ಯ".**[1] **"ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಶೈವಧರ್ಮ ಪ್ರಬಲವಾಗಿದ್ದುದರಿಂದ ವೀರಗಲ್ಲಿನ ಮೇಲಿನ ಹಂತದಲ್ಲಿ ಶೈವಧರ್ಮ ಸಂಕೇತಗಳ ವಿವರ ಇರುತ್ತದೆ"**[2] ಎಂದು ಶೇಷಾಶಾಸ್ತ್ರಿಯವರು ಅಭಿಪ್ರಾಯಿಸಿದ್ದಾರೆ. ಈ ಕಾಲದಲ್ಲಿ ಕೊನೆಯ ಹಂತವು ವೀರ ಕೇಂದ್ರಿತದಿಂದ ದೈವ ಕೇಂದ್ರಿತವಾಯಿತು. ವೀರನು ದೈವಭಕ್ತನಾಗಿ ದೇವ ಗಣದಲ್ಲಿ ಒಬ್ಬನಾಗಿ ಸ್ಥಾನ ಪಡೆಯುತ್ತಾನೆ.

ರಾಷ್ಟ್ರಕೂಟ ಕಾಲದ ರೀತಿಯಲ್ಲಿ ವೀರನನ್ನೇ ದೈವವಾಗಿ ಪೂಜಿಸುವ ಪರಿಪಾಠ ಬೆಳೆಯಿತು. ವೀರ ಪೂಜೆಯು ಒಂದು ಸಂಪ್ರದಾಯವಾಗಿ ಬೆಳೆದಿರಬಹುದಾದ ಸಾಧ್ಯತೆಗಳಿದ್ದು, ಮರಣ ಹೊಂದಿದ ವೀರನ ಪ್ರತಿರೂಪವಾಗಿ ವೀರಗಲ್ಲುಗಳನ್ನು ರಚಿಸಲಾಗಿದೆ. ಪ್ರತಿದಿನದ ಪೂಜೆಗೆ ತಗಲುವ ಖರ್ಚು ವೆಚ್ಚಗಳನ್ನು ಸರಿದೂಗಿಸಲು ಪೂಜಿಸುವವರಿಗೆ ಭೂದತ್ತಿಗಳನ್ನು ನೀಡಲಾಗುತ್ತಿತ್ತು. ಸಾ.ಶ.1292ರ ವೀರಗಲ್ಲು ಶಾಸನವು **"ಯಿ ಕಲ್ಲು ಪೂಜಿಸುವವರಿಗೆ ಮಸಣಿತಂಮನ ಯಿಡಿನಗಣ್ಣ ಕೊ 7ರ ಬೆದೆಯನು ಬಿಟ್ಟುದು"**[3] ಎಂದು ತಿಳಿಸುತ್ತದೆ. ವೀರಗಲ್ಲುಗಳನ್ನು ವೀರರ ನೆನಪಿಗಾಗಿ ಪ್ರತಿನಿತ್ಯ ಪೂಜಿಸಲಾಗುತ್ತಿತ್ತು. ಅದಕ್ಕಾಗಿ ಪೂಜಿಸುವವರನ್ನು ನೇಮಿಸಲಾಗುತ್ತಿತ್ತು. ಕೇವಲ ವೀರರ ನೆನಪಿಗಾಗಿ ವೀರಗಲ್ಲುಗಳನ್ನಷ್ಟೇ ನಿಲ್ಲಿಸುತ್ತಿರಲಿಲ್ಲ, ಅವರ ನೆನಪು, ತ್ಯಾಗ ಮನೋಬಾವ ಮುಂದಿನ ತಲೆಮಾರುಗಳಿಗೂ ತಿಳಿಯಬೇಕು ಎಂಬುದರ ಜೊತೆಗೆ ನಿಸ್ವಾರ್ಥವಾಗಿ

---

[1] ಶೇಷಾಶಾಸ್ತ್ರಿ. ಆರ್. (2017). *ಕರ್ನಾಟಕದ ವೀರಗಲ್ಲುಗಳು.* ಪು.ಸಂ:ಪುಟ. 61

[2] ಅದೇ. ಪುಟ. 262.

[3] ನರಸಿಂಹ ಮೂರ್ತಿ.ಎ.ವಿ. (ಸಂ.). (1998). *ಎಫಿಗ್ರಾಫಿಯ ಕರ್ನಾಟಕ.* ಸಂಪುಟ 11. ಪಟ.16.

ಪ್ರಾಣ ತ್ಯಾಗ ಮಾಡಿದ ಅವರು ದೇವರ ಸಮಾನ, ಪೂಜಾರ್ಹರು ಎಂಬುದು ಅವರ ಉದ್ದೇಶವಾಗಿತ್ತು. ಜೊತೆಗೆ ಆ ಸಮಾಜ ಅದನ್ನು ಪಾಲಿಸಬೇಕಿತ್ತು. ***"ಬೊಮ್ಮಗವುಡನ ಮಗ ಬೈಚಗವುಡನ ಹಗೆಗೆ ಕವುತೆಯ ಹದಮಾದೆಗವುಡ ಗಿನಮಲಗವುಡನ ಕೊಂದು ಪರೋಕ್ಷವಿನಯಮಂ ಮಾಡಿ . . . .ಚದೆಯ ಹರವಳ ಬಲ . .ಸಂಣಗುಡಿಕೆಯ ಕೊಂಡು . . .ನಿಲಿಸಿದ ವೀರಗಲ್ಲು ಇದಕೆ ಆರಾನು ಅಳಿಸಿದರೆ . . .ವಗೆ . .ಯ ಹೆಂಣಗಂಡಿನ ಮಕಳ ರಕಸತಿ ಶ್ರೀ ಯಿ ಕಲ ತಡವರು ಕವಿಲೆಯ ಕೊಂದ ಪಾಪ ಆತನು ಪೋಲೆವತು"*** [4] ಎಂದು ಉಪ್ಪವಳ್ಳಿಯ ಸಾ.ಶ.1229ರ ವೀರಗಲ್ಲು ತಿಳಿಸುತ್ತದೆ. ವೀರಗಲ್ಲನ್ನು ಅಳಿಸಿದರೆ, ನಾಶಮಾಡಿದರೆ, ಪಾಲಿಸದಿದ್ದರೆ ಕವಿಲೆಯ ಕೊಂದ ಪಾತಕದಷ್ಟು ದೋಷ ಅಥವಾ ಶಾಪ ದೊರಕುತ್ತದೆ ಎಂದು ಜನರನ್ನು ಭಯಪಡಿಸುವುದರ ಮೂಲಕ ವೀರಗಲ್ಲುಗಳನ್ನು ಯಾರೂ ನಾಶ ಮಾಡದಂತೆ ರಕ್ಷಿಸಲಾಗುತ್ತಿತ್ತು. ಅದಕ್ಕಾಗಿ ದಾನ ಶಾಸನಗಳಲ್ಲಿ ಇರುವಂತೆ ವೀರಗಲ್ಲು ಶಾಸನಗಳ ಕೊನೆಯಲ್ಲಿ ಶಾಪಾಶಯಗಳನ್ನು ಹಾಕಿಸಲಾಗುತ್ತಿತ್ತು.

"ರಾಜತ್ವ ಸಿದ್ಧಾಂತದಲ್ಲಿ ದುಷ್ಟ ನಿಗ್ರಹ ಮತ್ತು ಶಿಷ್ಟ ಪರಿಪಾಲನವು ರಾಜನ ಕರ್ತವ್ಯವಾಗಿರುತ್ತದೆ".[5] ಸೈನಿಕ ಅಥವಾ ವೀರನು ತನ್ನ ಜೀವವಿರುವವರೆಗೂ ಸಮಾಜವನ್ನು ರಕ್ಷಿಸುವ ಜವಾಬ್ದಾರಿ ಹೊಂದಿರುತ್ತಾನೆ. ಸಮಾಜವು ಸಹ ಮಡಿದ ವೀರನ ಕುಟುಂಬವನ್ನು ರಕ್ಷಿಸುವ ಜವಾಬ್ದಾರಿ ಹೊಂದಿರುತ್ತದೆ. ಇದು ವೀರ ಹಾಗೂ ಸಮಾಜದ ನಡುವಿನ ಅಲಿಖಿತ ನಿಯಮವಾಗಿದ್ದಿತು. ಸಾ.ಶ. ಒಂಭತ್ತನೇ ಶತಮಾನದಿಂದ ಹನ್ನೆರಡನೇ ಶತಮಾನದವರೆಗಿನ ಕಾಲಘಟ್ಟವನ್ನು ವೀರ ಯುಗ ಎಂದು ಕರೆಯಲಾಗಿದೆ. ಅಂದಿನ ಕವಿಗಳು ಸಹಾ ಸೈನಿಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರಲ್ಲಿನ ಕಲಿತನವೇ ಅವರ ಬರವಣಿಗೆಗಳಲ್ಲಿ ಮೂಡಿ ಬಂದು ವೀರ ಸಿದ್ಧಾಂತದ ಉಗಮಕ್ಕೆ ಕಾರಣ ಎನ್ನಬಹುದು. ಪಂಪ, ಚಾವುಂಡರಾಯ, ನಾಗವರ್ಮ, ಜನ್ನ ಇವರುಗಳು ಸೈನಿಕರಾಗಿ, ದಂಡಾಧೀಶರಾಗಿ, ಸೇವೆ ಸಲ್ಲಿಸಿದ್ದಾರೆ. "ಎಲ್ಲ ಗುಣಗಳೂ ಈ ಮಣ್ಣಿನಿಂದಲೆ ಉಂಟಾಗುವವು. ಅದೇ ರೀತಿ ಕೆಚ್ಚು ಇಲ್ಲದ ಮರ ಕಲಿತನವಿಲ್ಲದ ಮನುಷ್ಯ ಇವರು ಭವದಲ್ಲಿ ಬಾಳುವುದು ಅಸಾಧ್ಯವಾಗುತ್ತದೆ".[6]

***"ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾವಾ ಭೋಕ್ಷ್ಯಸೇ ಮಹೀಮ್ ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಂ"*** [7] ಎಂಬ ಭಗವದ್ಗೀತೆಯ ಶ್ಲೋಕವು ಯುದ್ಧದಲ್ಲಿ ಕೊಲ್ಲಲ್ಪಟ್ಟರೆ ಸ್ವರ್ಗವನ್ನು ಪಡೆಯುತ್ತಾರೆ ಅಥವಾ ಯುದ್ಧದಲ್ಲಿ ಗೆದ್ದರೆ ಪೃಥ್ವಿಯ ರಾಜ್ಯ ದೊರಕುತ್ತದೆ ಎಂದು ತಿಳಿಯುತ್ತದೆ. ವೀರ ಪೂಜೆ ಹಾಗೂ ವೀರ ಸ್ವರ್ಗ ಕಲ್ಪನೆಗಳನ್ನು ಜನರಲ್ಲಿ ಧನಾತ್ಮಕ ಚಿಂತನೆಗಳ ಹುಟ್ಟಿಗೆ ಕಾರಣವಾಗಿರಬಹುದು. ಇದರಿಂದ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು, ಅಶಕ್ತರಿಗೆ ರಕ್ಷಣೆ ನೀಡುವುದು, ಯುದ್ಧದಲ್ಲಿ ವೀರಾವೇಶದಿಂದ ಹೋರಾಡುವುದು, ಗೋ ರಕ್ಷಣೆ, ಸ್ತ್ರೀ ರಕ್ಷಣೆ, ಮಾಡುವಂತಹ ಮನೋಭಾವನೆ ಜನರಲ್ಲಿದ್ದಿತು. **"ತುರುಗೊಳೋಳ್ ಪೆಣ್ಬುಯ್ಯಲೋಳೆರೆವಸದೊಳು ನಟರೆಡರೊಳದಣ್ಣತಲಿ ಚೀಲಗುಡಂ ನೆರೆಗಲಿ ತರಿಸಂದು ತಾಗಿದಂ ವನಭರತಂ"**[8] ಅಂತೆಯೇ ಆಪತ್ತಿನ ಸಂದರ್ಭದಲ್ಲಿ ಸಹಾಯ ಮಾಡುವ ಮನೋಭಾವ ಹೊಂದಿದವರೇ ನಿಜವಾದ ವೀರರು ಅಂತಹವರಿಗೆ ವೀರಸ್ವರ್ಗ ದೊರೆಯುತ್ತದೆ. **"ಜಿತೇನ ಲಭ್ಯತೆ ಲಕ್ಷ್ಮೀ ಮೃತೇನಾಪಿ**

[4] ಅದೇ, ಪುಟ. 24.

[5] Setter, S. and Gunther, D. Sontheimar. (1980). Memorial Stones, P.17

[6] ಕಲುಬುರ್ಗಿ, ಎಂ. ಎಂ. *ಮಾರ್ಗ–1.* ಪುಟ.76.

[7] ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್. (2017). *ಶ್ರೀಮದ್ಭಗವದ್ಗೀತೆ.* ಪುಟ. 67

[8] ನರಸಿಂಹಮೂರ್ತಿ, ಎ. ವಿ. (ಸಂ). (1998). ಪೂರ್ವೋಕ್ತ, ಪುಟ. 418.

**ಸುರಂಗನಾ ಕ್ಷಣ ವಿದ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೆ"**[9] ಎಂಬ ಶ್ಲೋಕದಂತೆ ಬದುಕಿದರೆ ಲಕ್ಷ್ಮೀ, ಮೃತನಾದರೆ ಸುರಾಂಗನೆಯರು ಸಿಗುತ್ತಾರೆ. ಎಂಬಂತೆ ವೀರರು ಮರಣ ಹೊಂದಿದರೆ ಸ್ವರ್ಗಕ್ಕೆ ಹೋಗುತ್ತಾರೆ. ವೀರನು ತನ್ನ ಸಾವನ್ನು ಖುಷಿಯಿಂದ ಸಂಭ್ರಮಿಸುತ್ತಾನೆ. **"ಪಲರಿರ್ದು ಕಾದಿದರ್ ಮೆಯ್ಗಲಿಗಳ್ ನಿನ್ನುಂದೆ ಮೆಯ್ಯಳಂ ತವೆ ಕೊಂದಯ್ ಪಲರಂ ನಿನ್ನಂ ಪೆತ್ತಳ್ ಮೊಲೆವೆತ್ತಳೆ ವೀರಜನನಿ ವೆಸರಂ ಪೆತ್ತಳ್"**[10] ಶ್ಲೋಕಾರ್ಥದಂತೆ ವೀರನ ತಾಯಿ ತನ್ನ ಮಗನಿಗೆ ವೀರಮರಣ ಸಿಕ್ಕಿದ್ದಕ್ಕಾಗಿ ಹೆಮ್ಮೆ ಪಡುತ್ತಿದ್ದರು. ಅಂತಹ ತಾಯಿಯನ್ನು ವೀರ ಜನನಿ ಎನ್ನಲಾಗಿದೆ.

ಪಂಪನು ವಿಕ್ರಮಾರ್ಜುನ ವಿಜಯ ಗ್ರಂಥದಲ್ಲಿ ಸೈನಿಕರು ತಮ್ಮ ಹೆಂಡತಿಯರೊಂದಿಗೆ ಯುದ್ಧದ ಹಿಂದಿನ ದಿನ ನಡೆಸಿದ ಸಂಭಾಷಣೆಗಳ ಬಗ್ಗೆ ತಿಳಿಸುತ್ತಾನೆ. ಅದರಲ್ಲಿ ವೀರರು ನಾಳಿನ ಯುದ್ಧದಲ್ಲಿ ಸತ್ತು ವೀರ ಸ್ವರ್ಗ ಪಡೆಯಲು ಉತ್ಸುಕರಾಗಿರುತ್ತಾರೆ. ಒಂದು ಸಂಭಾಷಣೆಯಲ್ಲಿ **"**ನಾಳೆ ಖಂಡಿತವಾಗಿಯೂ ನನ್ನ ಗಂಡನು ನನ್ನನ್ನು ಒಬ್ಬಂಟಿಯಾಗಿ ಬಿಟ್ಟು ಆಕಾಶ ಅಪ್ಸರೆಯನ್ನು ಸೇರುತ್ತಾನೆ**"** ಎಂದು ತನಗೆ ತಾನೆ ಹೇಳಿಕೊಳ್ಳುತ್ತಾ, **"**ಒಬ್ಬಂಟಿಯಾಗಿರಲು ನಾನೇನು ಮೂರ್ಖಳೆ, ಇಲ್ಲ ನಾನೇ ಮುಂಚಿತವಾಗಿ ಸ್ವರ್ಗಕ್ಕೆ ಹೋಗಿ ಅವನನ್ನು ಸ್ವಾಗತಿಸುತ್ತೇನೆ ಮತ್ತು ಅವನನ್ನು ಸ್ವರ್ಗದ ಅಪ್ಸರೆಯರೊಂದಿಗೆ ಸೇರಲು ಬಿಡುವುದಿಲ್ಲ**"**[11] ಎಂದು ಸೈನಿಕನೊಬ್ಬನ ಹೆಂಡತಿ ಹೇಳಿಕೊಳ್ಳುತ್ತಾಳೆ. ಹೀಗೆ ವೀರಮರಣ ಹೊಂದಿದವರು ಸ್ವರ್ಗವಾಸಿಗಳಾಗುತ್ತಾರೆ ಎಂಬ ಕಲ್ಪನೆ ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿತ್ತು.

ವೀರ ಮರಣದ ನಂತರದಲ್ಲಿ ಅವನ ಕೀರ್ತಿ ಎಲ್ಲೆಡೆ ಮನೆಮಾತಾಗುತ್ತಿತ್ತು. ಇಂತಹ ವೀರರ ಬಗ್ಗೆ ಹಲವಾರು ಕಥೆ, ಕಾವ್ಯಗಳು ಹುಟ್ಟಿಕೊಂಡು ಜನರ ಬಾಯಲ್ಲಿ ಕಾಲಾನುಕಾಲದವರೆಗೆ ಪ್ರಸಾರವಾಗುತ್ತಿದ್ದವು. ಆ ಕಾಲಘಟ್ಟದ ಜನರ ಭಾವನೆಗಳಲ್ಲಿ, ಯುದ್ಧದಲ್ಲಿ ಹೋರಾಡಿ ಮರಣ ಹೊಂದಿ ವೀರರಾಗುವುದು, ವೀರ ಸ್ವರ್ಗ ಹೊಂದುವುದು ಪ್ರತಿಯೊಬ್ಬ ಸೈನಿಕನ ಕನಸಾಗಿತ್ತು. ಜೊತೆಗೆ ವೀರನ ಹೆಂಡತಿಯರು ಗಂಡ ಸತ್ತ ಮೇಲೆ ಒಬ್ಬಂಟಿಯಾಗಿರುವುದಕ್ಕಿಂತ, ಸತ್ತ ಗಂಡನೊಂದಿಗೆ ಸ್ವರ್ಗದಲ್ಲಿ ಸೇರಿ ಮಹಾಸತಿ ಎನಿಸಿಕೊಳ್ಳಲು ಬಯಸುತ್ತಿದ್ದರು. ಈ ರೀತಿಯಾಗಿ ಸಾಹಿತ್ಯವು ಸಹ ವೀರಸ್ವರ್ಗದ ಕಲ್ಪನೆ ಜನರಲ್ಲಿ ದೃಢವಾಗಿ ಬೇರೂರಲು ಕಾರಣವಾಗಿತ್ತು. ವೀರನ ಮರಣ ನಂತರ ಅವನಿಗೆ ನೀಡುತ್ತಿದ್ದ ಗೌರವ, ಸ್ಥಾನಮಾನ, ಜನರಲ್ಲಿ ಅವರ ಬಗ್ಗೆ ಇದ್ದ ಭಾವನೆಗಳು, ಅವರ ಕುಟುಂಬವನ್ನು ನಡೆಸಿಕೊಳ್ಳುತ್ತಿದ್ದ ರೀತಿ ನೀತಿಗಳು, ಆರ್ಥಿಕ ಸೌಲಭ್ಯಗಳು ವೀರನು ಸಾವನ್ನು ಲೆಕ್ಕಿಸದೇ ಧೈರ್ಯವಾಗಿ ಹೋರಾಡಲು ಪ್ರೋತ್ಸಾಹಕಗಳಾಗಿದ್ದವು. ರಾಜ್ಯ ವ್ಯವಸ್ಥೆಯಲ್ಲಿ ರಕ್ಷಣಾಂಗವನ್ನು ಬಲಪಡಿಸಿಕೊಳ್ಳಲು ಈ ಅಂಶಗಳು ಪ್ರಮುಖ ಕಾರಣಗಳಾಗಿವೆ. ಇವುಗಳನ್ನು ಸ್ಮಾರಕಗಳಲ್ಲಿ ಕಾಣಬಹುದು.

ರಾಷ್ಟ್ರಕೂಟ ಕಾಲದ ವೀರಸ್ವರ್ಗ ಕಲ್ಪನೆಯು ನಂತರದ ಕಾಲಘಟ್ಟಕ್ಕೆ ವೀರನಿಗೆ ದೈವತ್ವದ ಪಟ್ಟ ನೀಡಿ ವೀರಪೂಜಾ ಸಂಪ್ರದಾಯವಾಗಿ ಬದಲಾವಣೆಗೆ ಕಾರಣವಾಗಿರಬಹುದು. ವಿಭಿನ್ನ ಭೌಗೋಳಿಕ ಪರಿಸರವನ್ನು ಹೊಂದಿರುವ ಚಿಕ್ಕಮಗಳೂರು ಜಿಲ್ಲೆಯ ಮಲೆನಾಡಿನ ಒಂದು ಚಿಕ್ಕ ಭೂಪ್ರದೇಶದಲ್ಲಿ (ನಕ್ಷೆಯನ್ನು ನೋಡಿ) ಕಂಡುಬರುವ ಸ್ಮಾರಕಶಿಲ್ಪಗಳಲ್ಲಿ ರಾಷ್ಟ್ರಕೂಟ ಶೈಲಿಗಿಂತ ಭಿನ್ನವಾದ ಹೊಸ ಮಾದರಿಯೊಂದು ಕಂಡುಬಂದಿದ್ದು,


---

9 ನರಸಿಂಹಮೂರ್ತಿ, ಎ.ವಿ. (ಸಂ). (1998). ಪೂರ್ವೋಕ್ತ, ಚಿಮ–125, ಪುಟ. 78.

10 ಸಣ್ಣಯ್ಯ, ಬಿ. ಎಸ್. ಮತ್ತು ರಾಮೇಗೌಡ. (ಸಂ.). *ರನ್ನ ವಿರಚಿತ ಸಾಹಸಭೀಮವಿಜಯಂ (ಗದಾಯುದ್ಧಂ).* ಪು.ಸಂ 56–57.

11 Setter. S. and Gunther D. Sontheimar, 1980, Memorial Stones, Page:22.

ಹೊಯ್ಸಳರು ಸ್ಮಾರಕ ಶಿಲ್ಪಗಳ ರಚನೆಯಲ್ಲಿ ಹೊಸ ಪ್ರಯೋಗಕ್ಕೆ ಮುಂದಾದಂತೆ ಕಂಡುಬಂದಿದೆ. ಚಿಕ್ಕಮಗಳೂರಿನ ತಿರುಗುಣಿ (ಚಿತ್ರ–1), ಮೈಲಿಮನೆ (ಚಿತ್ರ–2), ಕೆಳಗೂರು (ಚಿತ್ರ: 3 ರಿಂದ 6), ಆಲ್ದೂರು (ಚಿತ್ರ–7 ಮತ್ತು 8), ಹವ್ವಳ್ಳಿ, ಬಣಕಲ್ಲು, ಮೂಗ್ತಿಹಳ್ಳಿ (ಚಿತ್ರ–9), ಕೂದುವಳ್ಳಿ, ಕೊಡವಳ್ಳಿ (ಚಿತ್ರ–10) ಹಾಗೂ ಉಪ್ಪವಳ್ಳಿ (ಚಿತ್ರ–11), ತಳಿಹಳ್ಳ, ಮೂಡಸಸಿ ಮತ್ತು ತ್ರಿಪುರ ಗ್ರಾಮಗಳ್ಳಿ ಸು.24ಕ್ಕೂ ಹೆಚ್ಚು ಅಪರೂಪದ ವೀರಗಲ್ಲುಗಳು ಗುರುತಿಸಲಾಗಿದೆ. ಇವುಗಳ ಮುಖೇನ ಹೊಯ್ಸಳರ ಕಾಲದಲ್ಲಿ ಪ್ರಚಲಿತದಲ್ಲಿದ್ದ ವೀರಪೂಜಾ ಸಂಪ್ರದಾಯವನ್ನು ನಿರೂಪಿಸಿರುವುದನ್ನು ಕಾಣಬಹುದಾಗಿದೆ.




ವೀರಪೂಜೆ ಸಂಪ್ರದಾಯ ಸ್ಮಾರಕಗಳು

ಈ ಪ್ರದೇಶದಲ್ಲಿ ಕಂಡುಬರುವ ಸ್ಮಾರಕಗಳು ಸಾ.ಶ.12ನೆಯ ಶತಮಾನದಿಂದ 14ನೆಯ ಶತಮಾನದ ಕಾಲಘಟ್ಟಕ್ಕೆ ಸಂಬಂಧಿಸಿವೆ. ಶಾಸನದ ದೃಷ್ಟಿಯಿಂದ ಸಾಮಾನ್ಯ ವೀರಗಲ್ಲುಗಳಂತೆ ಕಂಡುಬರುವ ಈ ಸ್ಮಾರಕಗಳು ಶಿಲ್ಪದ ದೃಷ್ಟಿಯಿಂದ ಮಹತ್ವ ಪಡೆದುಕೊಂಡಿವೆ. ಸಾಮಾನ್ಯವಾಗಿ ಈ ಸ್ಮಾರಕಗಳು ಮೂರು ಹಂತಗಳಲ್ಲಿದ್ದು, ಕೆಳಗಿನ ಹಂತವು ಹೋರಾಟದ ಶಿಲ್ಪವನ್ನು ಹೊಂದಿವೆ. ಕೆಲವು ಸ್ಮಾರಕಗಳಲ್ಲಿ ವೀರನ ಹಿಂಭಾಗದಲ್ಲಿ ಒಬ್ಬ ವ್ಯಕ್ತಿ ನಿಂತಿದ್ದು ತಲೆಯ ಮೇಲೆ ವಸ್ತುವೊಂದನ್ನು ಹೊತ್ತು ನಿಂತಿದ್ದಾನೆ. ಕೆಲವು ಸ್ಮಾರಕಗಳಲ್ಲಿ ಈತನು ನೀರಿನ ಪಾತ್ರೆಯನ್ನು ಹಿಡಿದಿದ್ದರೆ, ಕೆಲವು ಸ್ಮಾರಕಗಳಲ್ಲಿ ರಾಜಛತ್ರಿಯನ್ನು ಹಿಡಿದಿದ್ದಾನೆ. ವೀರನು ಧರಿಸಿರುವ ವಸ್ತ್ರವು ಸಾಮಾನ್ಯವಾಗಿ ವೀರನು ಧರಿಸುವ ವೀರಕಚ್ಚೆಗಿಂತ ಭಿನ್ನವಾಗಿದೆ. ಸೊಂಟಕ್ಕೆ ಪಂಜೆಯ ರೀತಿಯಲ್ಲಿ ವಸ್ತ್ರವನ್ನು ಸುತ್ತಿಕೊಂಡಿದ್ದು ಇದು ಮೊಣಕಾಲಿಗಿಂತ ಮೇಲಿರುತ್ತದೆ. ಸೊಂಟದಲ್ಲಿ ವಸ್ತ್ರವು ಬಿಗಿಯಾಗಿರಲೆಂದು ಪಟ್ಟಿಯನ್ನು ಕಟ್ಟಲಾಗಿದೆ. (ಚಿತ್ರ–1)

ಸಾ.ಶ.11ನೆಯ ಶತಮಾನದ ಹೊತ್ತಿಗೆ ಸ್ವರ್ಗಾರೋಹಣ ಹಂತದಲ್ಲಿ ಬದಲಾವಣೆಗಳು ಪ್ರಾರಂಭವಾಗಿ ಮಂಟಪ ಹಾಗೂ ಪುಷ್ಪಕ ವಿಮಾನದ ರೀತಿಯ ರಚನೆಗಳು ಕಂಡುಬರುತ್ತವೆ. ಸಾ.ಶ. 12 ರಿಂದ 13ನೆಯ ಶತಮಾನಕ್ಕಾಗಲೇ ಮಾದರಿಯೊಂದು ಸಿದ್ಧಗೊಂಡು ವೀರನು ಪುಷ್ಪಕ ವಿಮಾನದಲ್ಲಿ ಕುಳಿತು ಪ್ರಯಾಣ ಮಾಡುವಂತಿರುತ್ತದೆ. ಎಲ್ಲಿಯೂ ವೀರನು ಅಪ್ಸರೆಯರ ಹೆಗಲ ಮೇಲೆ ಕೈ ಹಾಕಿ ಕುಳಿತಿರುವಂತೆ ತೋರಿಸುವುದಿಲ್ಲ. ಇಂಥ ವೀರನು ಶಿವಭಕ್ತನಂತೆ ಚಿತ್ರಿತನಾಗಿರುತ್ತಾನೆ. ಪ್ರಸ್ತುತ ಸ್ಮಾರಕದ ಮಧ್ಯದ ಕೋಷ್ಠಕದಲ್ಲಿ ವೀರನ ಸ್ವರ್ಗಾರೋಹಣ ಚಿತ್ರಣವನ್ನು ಬಿಡಿಸಲಾಗಿದೆ. ವೀರನು ಇಬ್ಬರು ಛಾಮರಧಾರಿ ಅಪ್ಸರೆಯರ ಹೆಗಲ ಮೇಲೆ ಕೈ ಹಾಕಿರುವಂತೆ ಚಿತ್ರಿಸಲಾಗಿದೆ. ಈ ಸ್ಮಾರಕವು ಸಾ.ಶ.14ನೆಯ ಶತಮಾನಕ್ಕೆ ಸೇರಿದ್ದಾದರೂ ಸಹಾ ಇನ್ನೂ ರಾಷ್ಟ್ರಕೂಟ ಮಾದರಿಯನ್ನು ಅನುಸರಿಸಲಾಗಿದೆ.

ಮೇಲಿನ ಕೊನೆಯ ಹಂತವು ವಿಶೇಷವಾಗಿದ್ದು ಮಧ್ಯದಲ್ಲಿ ವೀರನು ವೇದಿಕೆಯ ಮೇಲೆ ಕುಳಿತಿದ್ದು ಎಡಭಾಗಕ್ಕೆ ಮುಖಮಾಡಿದ್ದಾನೆ. ಕೋಷ್ಠಕದ ಬಲಭಾಗದಲ್ಲಿ ಯತಿಯೊರ್ವನು ವೀರನಿಗೆ ಅಭಿಮುಖವಾಗಿ ನಿಂತು ಪೂಜಿಸುತ್ತಿದ್ದಾನೆ. ವೀರನು ಎಡಗೈಯನ್ನು ಯತಿಯ ತಲೆ ಮೇಲೆ ಇಟ್ಟು ಆಶೀರ್ವದಿಸುತ್ತಿದ್ದು, ಬಲಗೈಯನ್ನು ಅಭಯ ಹಸ್ತದ ರೀತಿ ಹಿಡಿದಿದ್ದಾನೆ. ವೀರನ ಹಿಂದೆ ಛಾಮರಧಾರಿ ಅಪ್ಸರೆ ಕುಳಿತಿದ್ದಾಳೆ. ಈ ರೀತಿಯಾಗಿ ಹೊಸ

ಮಾದರಿಯೊಂದು ಚಿತ್ರಿತವಾಗಿರುವುದು ಕಂಡುಬರುತ್ತದೆ.

ದೊರೆತಿರುವ ಬಹುತೇಕ ವೀರಗಲ್ಲುಗಳಲ್ಲಿ ಸಾ.ಶ.12ನೆಯ ಶತಮಾನದ ನಂತರದ ಕಾಲಘಟ್ಟಕ್ಕಾಗಲೇ ಮೇಲಿನ ಪಟ್ಟಿಕೆಯಲ್ಲಿ ಸುಕನ್ನಿಕೆಯರೊಡನೆ ರಮಿಸುವ ಕಲ್ಪನೆಗೆ ಬದಲಾಗಿ ಶಿವಸಾನಿಧ್ಯದಲ್ಲಿ ಸ್ಥಿರವಾಗಿ ನೆಲೆಸುವ ಕಲ್ಪನೆಯು ಅಂತಿಮ ಹಂತ ತಲುಪುತ್ತದೆ. ಈ ಘಟ್ಟದಲ್ಲಿ ಕೆಲವೊಂದು ವೀರಗಲ್ಲುಗಳಲ್ಲಿ ಮೇಲಿನ ಪಟ್ಟಿಕೆಯಲ್ಲಿ ಜಿನಲೋಕ ಅಥವಾ ವಿಷ್ಣುಲೋಕಗಳು ಕಾಣಿಸಿಕೊಳ್ಳುತ್ತವೆ ಎಂಬುದು ಗಮನಾರ್ಹ. ಆದರೆ ಈ ಕಾಲದ ಬಹುಪಾಲು ವೀರಗಲ್ಲುಗಳಲ್ಲಿ ಶಿವಲೋಕದ ಚಿತ್ರಣವೇ ಕಂಡುಬರುತ್ತದೆ.[12] ಪ್ರಸ್ತುತ ಮಲೆನಾಡಿನ ಈ ಭೌಗೋಳಿಕ ಪರಿಸರದಲ್ಲಿ ಕಂಡುಬರುವ ಸ್ಮಾರಕಗಳ ಮೇಲಿನ ಪಟ್ಟಿಕೆಯು ಈ ಮೇಲೆ ತಿಳಿಸಿದಂತೆ ಭಿನ್ನವಾಗಿದ್ದು, ವೀರನನ್ನು ದೇವರಂತೆ ಚಿತ್ರಿಸಲಾಗಿದೆ. ಶಾಸನಗಳಲ್ಲಿ ವೀರನು ***'ಶಿವಲೋಕ ಪ್ರಾಪಿತನಾದ'***[13], ***'ಸುರಲೋಕ ಪ್ರಾಪ್ತನಾದೊಡೆ'***[14], ***'ಸುರಲೋಕ ಪ್ರಾಪ್ತನಾದ'***[15] ಎಂದು ಉಲ್ಲೇಖಿಸಿದ್ದರೂ ಸಹ ಇಲ್ಲಿ ಶಿವಲೋಕದ, ಸ್ವರ್ಗದ ಚಿತ್ರಣವನ್ನು ಕಾಣಲಾಗುವುದಿಲ್ಲ. ವೀರನು ಶಿವಭಕ್ತನಾದರೂ ಅಪ್ಸರೆಯರ ಹೆಗಲ ಮೇಲೆ ಕೈ ಹಾಕಿರುವಂತೆ ಚಿತ್ರಿಸಿರುವ ಉದ್ದೇಶವಾದರೂ ಏನು? ಎಂಬುದು ಪ್ರಶ್ನಾರ್ಹವಾಗಿದೆ. ಯತಿಯೋರ್ವನು ವೀರನನ್ನು ಪೂಜಿಸುತ್ತಿದ್ದು ವೀರನು ದೈವವಾಗಿ ಮಾರ್ಪಟ್ಟಿದ್ದಾನೆ. ಆದರೆ ಈ ಪಟ್ಟಿಕೆಯು ಬೇರೆ ಏನನ್ನೋ ವಿವರಿಸುವಂತಿದೆ.

ರಾಜಾರಾಮ ಹೆಗಡೆರವರು ತಮ್ಮ ಲೇಖನದಲ್ಲಿ ವೀರಗಲ್ಲುಗಳ ಮೇಲಿನ ಪಟ್ಟಿಕೆಯಲ್ಲಿನ ಚಿತ್ರಣಗಳನ್ನು ಕುರಿತು ವಿವರಿಸುವಾಗ "ಈ ವೀರಗಲ್ಲು ಶಿಲ್ಪಗಳು ಶಿವಲೋಕವನ್ನು ಪ್ರತಿನಿಧಿಸುತ್ತಿಲ್ಲ ಬದಲಾಗಿ ದೇವಾಲಯ ವಾಸ್ತು ಸಂಕೀರ್ಣ ಹಾಗೂ ಪೂಜಾ ವಿಧಿಗಳನ್ನು ತೋರಿಸುತ್ತವೆ" ಎಂದು ಅಭಿಪ್ರಾಯಿಸಿದ್ದಾರೆ.[16] ಅಂತೆಯೇ ಮೇಲಿನ ಪಟ್ಟಿಕೆಯಲ್ಲಿನ ಶಿವಲಿಂಗು, ನಂದಿ, ವೀರ, ಆಚಾರ್ಯರನ್ನು ಆಧರಿಸಿ ವೀರನು ಮರಣಾನಂತರ ಶಿವಲೋಕ ಸೇರಿದ ಎನ್ನುವುದಾದರೆ, ಹಲವು ವೀರಗಲ್ಲು ಮೇಲಿನ ಪಟ್ಟಿಕೆಯು ಶಿವಲಿಂಗು ಮತ್ತು ಇತರೆ ಅಂಶಗಳನ್ನು ಹೊಂದಿದ್ದರೂ ಸಹ ಅದೇ ವೀರಗಲ್ಲಿನ ಶಾಸನವು ವೀರರು ಸುರಲೋಕ ಸೇರಿದ ಬಗ್ಗೆ ತಿಳಿಸುತ್ತವೆ. ಕದಿರೆಮಿದಿರೆಯ ಕಲ್ಲೇಶ್ವರ ದೇವಾಲಯದ ಮುಂದಿರುವ ಎರಡನೆಯ ವೀರಗಲ್ಲು "ಮಿಂಡಗಉಡನ ಮಗ ಮಿಂಡನು ಸುರಲೋಕ ಪ್ರಾಪಿತನಾದನು"[17] ಎಂದು ಮೂರನೆಯ ವೀರಗಲ್ಲು "ಬಯಿರಂಣನು ಸುರಲೋಕ ಪ್ರಾಪಿತನಾದನು"[18] ಎಂದು ತಿಳಿಸುತ್ತವೆ. ಈ ವೀರಗಲ್ಲುಗಳ ಮೇಲಿನ ಪಟ್ಟಿಕೆಯನ್ನು ವೀಕ್ಷಿಸಿದಾಗ ಶಿವಲೋಕ ಎಂದು ಹೇಳುವ ಚಿತ್ರಣವು ಕಂಡುಬರುತ್ತದೆ (ಚಿತ್ರ–12 ಮತ್ತು ಚಿತ್ರ–13). ಇದನ್ನು ಶಿವಲೋಕ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಶಾಸನಗಳೇ ವೀರನು ಸುರಲೋಕ ಪ್ರಾಪಿತನಾದನು ಎಂದು ಹೇಳುತ್ತಿವೆ. ಪ್ರಸ್ತುತ ಸಂಶೋಧನ ಸ್ಮಾರಕಗಳಲ್ಲಿ ತಿರುಗುಣಿ ಶಾಸನವು ವೀರನು ಸಿವಲೋಕ ಪ್ರಾಪಿತನಾದನು ಎಂದು ಹೇಳುತ್ತಿದೆ. ಆದರೆ ಮೇಲಿನ ಪಟ್ಟಿಕೆಯಲ್ಲಿ ಶಿವಲೋಕ ಚಿತ್ರಣವಿಲ್ಲ. ಕೆಳಗೂರಿನ ಶಾಸನಗಳು ಸುರಲೋಕ ಪ್ರಾಪ್ತನಾದ ಎಂದು ಉಲ್ಲೇಖಿಸುತ್ತವಾದರೂ ಸ್ವರ್ಗದ ಚಿತ್ರಣವು ಕಂಡುಬರುವುದಿಲ್ಲ. ಬದಲಾಗಿ ವೀರ ಪೂಜೆಯ ಚಿತ್ರಣವಿದೆ. ಆದ್ದರಿಂದ ಸಾಮಾನ್ಯವಾಗಿ ಮೇಲಿನ

---

12 ರಾಜಾರಾಮ ಹಗಡೆ. (2018). ಪೂರ್ವೋಕ್ತ, ಪುಟ.64.

13 ನರಸಿಂಹಮೂರ್ತಿ. ಎ. ವಿ.(ಸಂ). (1998). ಪೂರ್ವೋಕ್ತ, ಚಿಮ–117, ಪುಟ. 75

14 ಅದೇ. (1998). ಚಿಮ–162, ಪುಟ. 100.

15 ಅದೇ, 1998, ಚಿಮ–168. 170, ಪುಟ. 104–105

16 ರಾಜಾರಾಮ ಹಗಡೆ. (2018). ಪೂರ್ವೋಕ್ತ, ಪುಟ. 67.

17 ನರಸಿಂಹಮೂರ್ತಿ. ಎ. ವಿ.(ಸಂ). (1998). ಪೂರ್ವೋಕ್ತ, ಚಿಮ–121, ಪುಟ. 76.

18 ಅದೇ, ಚಿಮ–122, ಪುಟ. 77.

ಪಟ್ಟಿಕೆಯಲ್ಲಿ ಕಂಡುಬರುವ ಅಂಶಗಳು ಲೋಕ ಕಲ್ಪನೆಯ ಬದಲಾಗಿ ಬೇರೆ ಏನನ್ನೋ ಹೇಳುತ್ತಿವೆ ಎಂಬುದು ಸ್ಪಷ್ಟ.

ವೀರಗಲ್ಲುಗಳ ಮೇಲಿನ ಪಟ್ಟಿಕೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಶಿವಲಿಂಗಕ್ಕೆ ಆರತಿ ಮಾಡುತ್ತಿರುವ ಯತಿಗಳು, ಪರಿವಾರ ದೇವತೆಯಾದ ನಂದಿ, ಶಂಖ ಊದುತ್ತಿರುವುದು (ಚಿತ್ರ–14), ಪೂಜಾ ಸಮಯದಲ್ಲಿ ವಾದ್ಯಗಳನ್ನು ನುಡಿಸುತ್ತಿರುವ ವಾದ್ಯಗಾರರು (ಚಿತ್ರ–15), ಪರಿವಾರ ದೇವತೆಯಾದ ಗಣೇಶ (ಚಿತ್ರ–16), ದೇವಾಲಯದ ಮಾಡಿಗೆ ಕಟ್ಟಿದ ಬೇರಿಗಳನ್ನು ಭಾರಿಸುವುದು (ಚಿತ್ರ–17), ಕೀರ್ತಿಮುಖ ಹಾಗೂ ಗಂಟೆ ಭಾರಿಸುತ್ತಿರುವ (ಚಿತ್ರ–18) ಈ ಅಂಶಗಳನ್ನು ಕಾಣಬಹುದು. ಇವುಗಳು ಒಂದು ದೇವಾಲಯ ಪರಿಸರವನ್ನು ಸೂಚಿಸುತ್ತದೆ ಮತ್ತು ಸಾಮಾನ್ಯವಾಗಿ ಕಂಡುಬರುವ ಕೈ ಮುಗಿದು ಕುಳಿತಿರುವ ವೀರನು ದೇವಾಲಯದಲ್ಲಿ ಇತರೆ ದೇವತೆಯಾಗಿ ಪೂಜೆಗೆ ಒಳಗಾಗುತ್ತಿದ್ದಾನೆ ಎಂಬುದಾಗಿದೆ. ಇದನ್ನೇ ರಾಜಾರಾಮ ಹೆಗಡೆಯವರು "ಶಿವಲೋಕವನ್ನು ತೋರಿಸಲು ಕೇವಲ ಶಿವಲಿಂಗವಷ್ಟೇ ಸಾಕಾಗಿತ್ತು ಈ ಅಂಶಗಳನ್ನು ತೋರಿಸುವ ಅವಶ್ಯಕತೆಯಿರಲಿಲ್ಲ. ಅಂದರೆ ಶಿಲ್ಪಿಗಳು ತಮ್ಮ ಕಾಲದ ಶಿವದೇವಾಲಯಗಳಲ್ಲಿ ಪೂಜೆ ನಡೆಯುವ ದೃಶ್ಯವನ್ನು ತೋರಿಸಲು ಇಲ್ಲಿ ಪ್ರಯತ್ನಿಸುತ್ತಿದ್ದಾರೆ ಎಂಬುದು ಸ್ಪಷ್ಟ ಎಂದಿದ್ದಾರೆ."[19] ಉಪ್ಪವಳ್ಳಿಯ ಸಾ.ಶ.1145ರ ವೀರಗಲ್ಲಿನ ಮೇಲಿನ ಕೋಷ್ಠಕದಲ್ಲಿ ದೇವಾಲಯ ಮಾದರಿ ಚಿತ್ರಣವು ಕಂಡುಬಂದಿದೆ. ಎರಡು ಕಂಬಗಳ ಮಧ್ಯೆ ಶಿವಲಿಂಗುವಿದ್ದು ಯತಿಯು ಪೂಜಿಸುತ್ತಿದ್ದಾನೆ. ಕಂಬಗಳ ಮೇಲಿನ ಭಾವಣಿಯು ಕಪೋತವನ್ನು ಹೊಂದಿದೆ. ಶಿಖರವು ಪಾಂಸನ ಮಾದರಿಯಲ್ಲಿದ್ದು ಹಂತ ಹಂತವಾಗಿ ಮೇಲೇರಿದ್ದು ಮೇಲ್ಭಾಗದಲ್ಲಿ ಕಳಸವಿದೆ. ಇನ್ನೂ ಶಿವಲಿಂಗುವಿನ ಬಲಭಾಗದಲ್ಲಿ ನಂದಿ ಹಾಗೂ ಸೇವಕರಿದ್ದಾರೆ. ಎಡಭಾಗದಲ್ಲಿ ಕೈ ಮುಗಿದು ಕುಳಿತ ವೀರನಿಗೆ ಯತಿಯು ಆರತಿ ಬೆಳಗುತ್ತಿದ್ದಾನೆ. ಇದು ಶಿವದೇವಾಲಯದ ಪರಿಸರವೇ ಆಗಿದೆ. ಶಿವಾಲಯದಲ್ಲಿ ಪರಿವಾರ ದೇವತೆಗಳ ರೂಪದಲ್ಲಿ ವೀರನು ಒಬ್ಬ ದೇವತೆಯಾಗಿ ಪೂಜೆಗೆ ಒಳಗಾಗುತ್ತಿದ್ದನು. ಅದನ್ನೆ ಆ ಕಾಲದ ಶಿಲ್ಪಿಗಳು ಶಿಲ್ಪ ರೂಪದಲ್ಲಿ ತೋರಿಸಲು ಪ್ರಯತ್ನಿಸಿದಂತೆ ಕಾಣುತ್ತದೆ (ಚಿತ್ರ–19). "ಮಧ್ಯಕಾಲೀನ ಕಾಲದ ವೀರಗಲ್ಲುಗಳಲ್ಲಿ ಈ ರೀತಿಯಾಗಿ ಬದಲಾವಣೆಯು ಕಂಡುಬರುತ್ತದೆ. ಶೈವಧರ್ಮದ ಮಟ್ಟಿಗೆ ಹೇಳುವುದಾದರೆ ಶೈವಧರ್ಮ ಕರ್ನಾಟಕದಲ್ಲಿ ಪ್ರಬಲವಾದ ಹಾಗೆ ವೀರಗಲ್ಲುಗಳ ಶಿಲ್ಪದಲ್ಲಿ ಈ ರೀತಿಯ ವಿವರಣಾತ್ಮಕವಾದ ಶಿಲ್ಪಕ್ಕೆ ಕಾರಣವಾಯಿತೆಂದು ಹೇಳಬಹುದು".[20]

ಶಿವಲೋಕವನ್ನು ತೋರಿಸುವ ಉದ್ದೇಶವಿದ್ದರೆ ಕೈಲಾಸವಾಸಿಗಳಾದ ಶಿವ, ಪಾರ್ವತಿ, ಶಿವಗಣಗಳನ್ನು ಮಾನವ ರೂಪದಲ್ಲಿ ಚಿತ್ರಿಸಬಹುದಾಗಿತ್ತು. ಅಲ್ಲದೇ ಬಹುತೇಕ ದೇವಾಲಯಗಳಲ್ಲಿ ಶಿವನನ್ನು ಲಿಂಗರೂಪದಲ್ಲೇ ಪೂಜಿಸುವುದಾಗಿದ್ದು, ವೀರಗಲ್ಲಿನ ಈ ಪಟ್ಟಿಕೆಯು ಶಿವ ದೇವಾಲಯವನ್ನು ಸೂಚಿಸುತ್ತವೆ ಎಂಬುದು ಸ್ಪಷ್ಟ ಹಾಗೂ ಮರಣ ಹೊಂದಿದ ವೀರನು ಸುರಲೋಕ ಸೇರಿದನು ಎಂದು ಶಾಸನಗಳು ಹೇಳಿರುವ ವೀರಗಲ್ಲುಗಳ ಮೇಲಿನ ಪಟ್ಟಿಕೆಯಲ್ಲಿನ ಈ ಚಿತ್ರಣವನ್ನು ಶಿವಲೋಕ ಎಂದು ಹೇಳುವುದು ದ್ವಂದ್ವವನ್ನು ಉಂಟುಮಾಡುತ್ತದೆ. ಸುರಲೋಕದಲ್ಲಿ ವೀರನು ಅಪ್ಸರೆಯರೊಂದಿಗೆ ರಮಿಸುವ ಚಿತ್ರಣವನ್ನು ನೀಡಬಹುದಾಗಿತ್ತು. ಸುರಲೋಕ, ದೇವಲೋಕ, ಶಿವಲೋಕ, ಜಿನಲೋಕ, ವಿಷ್ಣುಲೋಕ ಇವುಗಳು ವೀರನ ಮರಣ ನಂತರದ ಜೀವನ ಕಲ್ಪನೆಯ ಮಾಧ್ಯಮಗಳಾಗಿವೆ. ಮರಣ ನಂತರ ವೀರನು ಈ ಮೇಲಿನ ಯಾವುದೇ ಲೋಕ ಸೇರಿದ್ದರೂ ಜನರ ಭಾವನೆಯಲ್ಲಿ ಒಬ್ಬ ದೇವತೆಯಾಗಿ ಸ್ಥಾನ ಪಡೆಯುತ್ತಾನೆ. ವೀರಗಲ್ಲು

[19] ರಾಜಾರಾಮ ಹಗಡೆ. (2018). *ಪೂರ್ವೋಕ್ತ.* ಪುಟ. 66

[20] ಶೇಷಶಾಸ್ತ್ರಿ. ಆರ್. (2017). ಪೂರ್ವೋಕ್ತ, ಪುಟ. 250.

ಮೇಲಿನ ಪಟ್ಟಿಕೆಯಲ್ಲಿ ವೀರ ಪೂಜೆಯ ಪ್ರತೀಕವಾಗಿ ದೇವಾಲಯ ಚಿತ್ರಣವನ್ನು ತೋರಿಸುತ್ತವೆ. ಪ್ರಸ್ತುತ ಸಂಶೋಧನ ವ್ಯಾಪ್ತಿಯ ವೀರಗಲ್ಲುಗಳು ಇದನ್ನು ಸ್ಪಷ್ಟಪಡಿಸುತ್ತವೆ. ಪ್ರಸ್ತುತ ಸಂಶೋಧನ ಸ್ಮಾರಕಗಳು ಶಿವಲೋಕ, ಸ್ವರ್ಗದ ಚಿತ್ರಣವನ್ನು ಹೊಂದಿರದೇ ಯತಿಯೊಬ್ಬನು ವೀರನನ್ನು ಪೂಜಿಸುತ್ತಿರುವಂತೆ ಚಿತ್ರಿಸಲಾಗಿದೆ. ಇದನ್ನು ಗಮನಿಸಿದಾಗ ಮೇಲಿನ ಪಟ್ಟಿಕೆಯು ವೀರ ಪೂಜೆಯನ್ನು ಸೂಚಿಸುತ್ತದೆಯೇ ಹೊರತು, ವೀರನ ನಂತರದ ಜೀವನವನ್ನಲ್ಲ ಎಂದು ಊಹಿಸಬಹುದು. ವೀರ ಪೂಜೆಯು ಕ್ರಮೇಣವಾಗಿ ದೇವಾಲಯ ಪೂಜಾ ಸಂಪ್ರದಾಯದಲ್ಲಿ ಲೀನವಾಗಿರುವುದನ್ನು ಇದು ಸೂಚಿಸುತ್ತದೆ. ವೀರ ಪೂಜೆಯು ವೀರ ಸ್ವರ್ಗಕ್ಕೂ ಮಿಗಿಲಾದ ಶಾಶ್ವತವಾದ ಪದವಿ ಪಡೆದುದ್ದನ್ನು ಸೂಚಿಸುತ್ತದೆ. ವ್ಯಕ್ತಿಗೆ ಸ್ವರ್ಗ ಪ್ರಾಪ್ತಿಯೇ ಅಂತಿಮವಲ್ಲ ಅದಕ್ಕೂ ಮಿಗಿಲಾದ ತನ್ನ ಇಷ್ಟ ದೈವದ ಸಾನಿಧ್ಯದಲ್ಲಿ ದೈವತ್ವದ ರೂಪ ಪಡೆದು ಪೂಜೆಗೆ ಒಳಗಾಗಿ ಮುಕ್ತಿ ಹೊಂದುವ ನಂಭಿಕೆಯಾಗಿದೆ.

ವೀರನು ಯಾವುದೋ ಬೇರೊಂದು ಸ್ಥಳದಲ್ಲಿ ಹತನಾಗಿದ್ದರೂ ಕೂಡ, ತನ್ನ ಗ್ರಾಮದ ದೇವಾಲಯದಲ್ಲಿ ಅವನ ನೆನಪಿಗಾಗಿ ವೀರಗಲ್ಲು ಹಾಕಿಸುತ್ತಿದ್ದರು. ಅತ್ತಿಮೊಘೆಯಲ್ಲಿ ನಡೆದ ಯುದ್ಧದಲ್ಲಿ ರಾಯಗವುಡ ಮರಣ ಹೊಂದಿದರೂ ಕೂಡ ಅವನ ವೀರಗಲ್ಲನ್ನು ಆಸಂದಿ[21] ಗ್ರಾಮದಲ್ಲಿ ಹಾಕಿಸಲಾಗಿದೆ. ಇಂದಾವರದ ಮಸಣಿತಂನ ಮಗ ವೀರ ಮಸಣ ಹೊನ್ನೂರು ಹೊಳೆ (ಹೊಳೆ ಹೊನ್ನೂರು)ಯಲ್ಲಿ ನಡೆದ ಯುದ್ಧದಲ್ಲಿ ಮಡಿದರೂ ಇಂದಾವರದ ಸಂಗಮೇಶ್ವರ ದೇವಾಲಯದ ಆವರಣದಲ್ಲಿ ಸ್ಥಾಪಿಸಲಾಗಿದೆ. ದೇವಾಲಯಗಳ ಬಳಿಯಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ವೀರಗಲ್ಲುಗಳಿರುವುದನ್ನು ಕಾಣಬಹುದು. ತರೀಕೆರೆ ತಾಲೂಕಿನ ಅಮೃತಾಪುರದ ಅಮೃತೇಶ್ವರ ದೇವಾಲಯದ ಒಳಗೆ ಎರಡು ಮತ್ತು ಆವರಣದಲ್ಲಿ ಎರಡು ವೀರಗಲ್ಲುಗಳಿವೆ. ಇಟ್ಟಿಗೆಯ ಈಶ್ವರ ದೇವಾಲಯದ ಆವರಣದಲ್ಲಿ ನಾಲ್ಕು ವೀರಗಲ್ಲುಗಳಿವೆ. ಅಜ್ಜಂಪುರ ತಾಲೂಕಿನ ಗಡೀಹಳ್ಳಿಯ ಈಶ್ವರ ದೇವಾಲಯದ ಬಳಿ ಎಂಟು ವೀರಗಲ್ಲುಗಳಿವೆ. ಶಿವನಿಯ ಕೇದಾರೇಶ್ವರ ದೇವಾಲಯದ ಬಳಿ ಐದು ವೀರಗಲ್ಲುಗಳಿವೆ. ಚಿಕ್ಕಮಗಳೂರು ತಾಲೂಕಿನ ಕದಿರೆಮಿದಿರೆ ಗ್ರಾಮದ ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ಐದು ವೀರಗಲ್ಲುಗಳಿವೆ. ಇಂದಾವರದ ಸಂಗಮೇಶ್ವರ ದೇವಾಲಯದ ಬಳಿ ಎಂಟು ವೀರಗಲ್ಲುಗಳಿವೆ. ಉಪ್ಪವಳ್ಳಿಯ ಊರ ಬಾಗಿಲ ಬಳಿ ಆರು, ಈಶ್ವರ ದೇವಾಲಯದ ಬಳಿ ನಾಲ್ಕು, ವಿರಕ್ತಮಠದ ತೋಪಿನ ಬಳಿ ಮೂರು ವೀರಗಲ್ಲುಗಳಿವೆ. ಹೀಗೆ ದೇವಾಲಯಗಳ ಆವರಣಗಳ ಬಳಿ ಹೆಚ್ಚು ಸಂಖ್ಯೆಯ ವೀರಗಲ್ಲುಗಳಿರುವುದನ್ನು ಕಾಣಬಹುದು. ಏಕೆಂದರೆ ದೇವಾಲಯಗಳಲ್ಲಿ ವೀರಗಲ್ಲುಗಳನ್ನು ವೀರನ ಸಂಕೇತವಾಗಿ ಪೂಜಿಸಲಾಗುತ್ತಿತ್ತು.

ರಾಷ್ಟ್ರಕೂಟ ಕಾಲದ ಸ್ಮಾರಕ ಶಿಲ್ಪಗಳ ಮೇಲಿನ ಕೋಷ್ಠಕದಲ್ಲಿ ನಿರೂಪಿತವಾಗುತ್ತಿದ್ದ ವೀರಸ್ವರ್ಗದ ಕಲ್ಪನೆಯು ಹೊಯ್ಸಳರ ಕಾಲಕ್ಕೆ ಬದಲಾಯಿತು. ಹೊಯ್ಸಳರ ಕಾಲದ ಸ್ಮಾರಕ ಶಿಲ್ಪಗಳ ಮೇಲಿನ ಕೋಷ್ಠಕದ ನಿರೂಪಣೆಯನ್ನು ಕೈಲಾಸ, ವೈಕುಂಠ ಮತ್ತು ಜಿನಲೋಕ ಎಂದೆಲ್ಲಾ ಕರೆದು ವೀರನು ಸಾವಿನ ನಂತರದಲ್ಲಿ ಸ್ವರ್ಗದ ಬದಲಾಗಿ ಈ ಮೇಲಿನ ಲೋಕಗಳನ್ನು ಸೇರಿದನು ಎಂದು ವಿದ್ವಾಂಸರು ಹೇಳಿರುವರಾದರೂ, ಅದಕ್ಕಿಂತ ಭಿನ್ನವಾಗಿ ಹೊಯ್ಸಳರ ಕಾಲದ ಸ್ಮಾರಕ ಶಿಲ್ಪಗಳ ಮೇಲಿನ ಕೋಷ್ಠಕದ ಶಿಲ್ಪ ನಿರೂಪಣೆಯು ದೇವಾಲಯ ಪರಿಸರವನ್ನು ಪ್ರತಿಬಿಂಬಿಸುತ್ತದೆ. ವೀರನು ಮರಣಾನಂತರ ದೈವವಾಗಿ ಪೂಜೆಗೆ ಒಳಗಾಗುತ್ತಾನೆ. ಅವನ ಸ್ಮಾರಕವಾದ ವೀರಗಲ್ಲನ್ನೇ ಅವನ ನೆನಪಿನಲ್ಲಿ ಪೂಜಿಸಲಾಗುತ್ತಿತ್ತು. ಪ್ರಸ್ತುತ

[21] ನರಸಿಂಹಮೂರ್ತಿ, ಎ. ವಿ. (ಸಂ). (2003). ಪೂರ್ವೋಕ್ತ, ಕ–254, ಪುಟ. 847.

ಉಲ್ಲೇಖಿತ ಚಿಕ್ಕಮಗಳೂರು ಪರಿಸರದ ವೀರಗಲ್ಲುಗಳು ಲೋಕ ಕಲ್ಪನೆಯ ಶಿಲ್ಪ ನಿರೂಪಣೆಗಿಂತ ಭಿನ್ನವಾಗಿ ವೀರ ಪೂಜಾ ಸಂಪ್ರದಾಯವನ್ನು ಸೂಚಿಸುತ್ತವೆ. ವೀರನು ಸಾವಿನ ನಂತರ ತನ್ನ ಇಷ್ಟ ದೈವದ ಸಾನಿದ್ಯ ಸೇರಿ ದೈವದ ರೂಪದಲ್ಲಿ ಪೂಜೆಗೆ ಒಳಗಾಗುತ್ತಿದ್ದನ್ನು ಈ ಶಿಲ್ಪವು ನಿರೂಪಿಸುತ್ತವೆ.

**ಪರಾಮರ್ಶನ ಗ್ರಂಥಗಳು**


- ಚಿದಾನಂದಮೂರ್ತಿ, ಎಮ್. (2017). *ಕನ್ನಡ ಶಾಸನಗಳ ಸಾಂಸ್ಕೃತಿ ಅಧ್ಯಯನ.* ಸಪ್ನ ಬುಕ್ ಹೌಸ್.
- ಚಿದಾನಂದಮೂರ್ತಿ, ಎಮ್. (2008). *ಬೃಹತ್ ಕರ್ನಾಟಕ: ಭಾಷಿಕ, ಸಾಂಸ್ಕೃತಿಕ.* ಸಪ್ನ ಬುಕ್ ಹೌಸ್.
- ಹಿರೇಮಠ್, ಬಿ. ಆರ್. (1976). *ವೀರಗಲ್ಲಗಳು.* ಕರ್ನಾಟಕ ವಿಶ್ವವಿದ್ಯಾನಿಲಯ.
- ಕಲಬುರ್ಗಿ, ಎಂ.ಎಂ. (2018). *ಮಾರ್ಗ–1.* ಸಪ್ನ ಬುಕ್ ಹೌಸ್.
- ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಂಕರ್. (2017). *ಶ್ರೀಮದ್ ಭಗವದ್ಗೀತೆ.* ಗೀತಾ ಪ್ರೆಸ್.
- ಮನೋಜ್, ಜಿ. (2015). *ದೇವಾಲಯಗಳ ವಾಸ್ತುವಿಜ್ಞಾನ.* ಸುಭೋದಿನಿ ಬುಕ್ ಪಬ್ಲಿಷರ್ಸ್.
- ನರಸಿಂಹ ಮೂರ್ತಿ, ಎ.ವಿ. (ಸಂ). (1998). *ಎಫಿಗ್ರಾಫಿಯ ಕರ್ನಾಟಕ ಸಂಪುಟ 11.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ನರಸಿಂಹ ಮೂರ್ತಿ, ಎ.ವಿ. (ಸಂ). (2003). *ಎಫಿಗ್ರಾಫಿಯ ಕರ್ನಾಟಕ ಸಂಪುಟ 12.* ಪ್ರಸರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಪರಮಶಿವಮೂರ್ತಿ, ಡಿ.ವಿ. (1999). *ಕನ್ನಡ ಶಾಸನ ಶಿಲ್ಪ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಾಜಾರಾಮ ಹೆಗಡೆ. (2018). *ಮಧ್ಯಕಾಲೀನ ಕರ್ನಾಟಕದ ವೀರಗಲ್ಲುಗಳಲ್ಲಿ ಸಾವಿನಾಚೆಯ ಲೋಕ. ಇತಿಹಾಸ ದರ್ಪಣ* 37–38.
- ಶೇಷಾಶಾಸ್ತ್ರಿ, ಆರ್. (2017). *ಕರ್ನಾಟಕದ ವೀರಗಲ್ಲುಗಳು.* ಕಾಮದೇನು ಪುಸ್ತಕ ಭವನ.
- Setter. S, Gunther D. Sontheimer. (1982). *Memorial Stones*. Karnataka University.


**ಅನುಬಂಧ–1**

**ವೀರಗಲ್ಲು ಛಾಯಾಚಿತ್ರಗಳು**



**ಚಿತ್ರ–1 ತಿರುಗುಣಿ**



**ಚಿತ್ರ–2 ಮೈಲಿಮನೆ**



ಚಿತ್ರ–3 ಕೆಳಗೂರು–1



ಚಿತ್ರ–4 ಕೆಳಗೂರು–2



ಚಿತ್ರ–5 ಕೆಳಗೂರು–3



ಚಿತ್ರ–6 ಕೆಳಗೂರು–4



ಚಿತ್ರ–7 ಆಲ್ದೂರು



ಚಿತ್ರ–8 ಆಲ್ದೂರು–2



ಚಿತ್ರ–9 ಮೂಗ್ತಿಹಳ್ಳಿ



ಚಿತ್ರ–10 ಕೊಡವಳ್ಳಿ



ಚಿತ್ರ–11 ಉಪ್ಪವಳ್ಳಿ



ಚಿತ್ರ–12 ಕದಿರೆಮಿದಿರೆ



ಚಿತ್ರ–13 ಕದಿರೆಮಿದಿರೆ



ಚಿತ್ರ – 14 ಬಸವನಹಳ್ಳಿ



ಚಿತ್ರ–15 ಚಿಕ್ಕನಲ್ಲೂರು



ಚಿತ್ರ–16 ಇಟ್ಟಿಗೆ



ಚಿತ್ರ–17 ಕುಡ್ಲೂರು



ಚಿತ್ರ–18 ಮುದಿಗೆರೆ



ಚಿತ್ರ–19 ಉಪ್ಪವಳ್ಳಿ



ಚಿತ್ರ–20 ಮೈಲಿಮನೆ